ಶ್ರೀ ಭೀಮಣ್ಣ ಖಂಡ್ರೆ:- ಈ ಚಿಕ್ಕೋಡಿ ಗ್ರಾಮದ ಜನಸಂಖ್ಯೆ ೨೭,೨೭೩. ಬೆಳಗಾವಿಯಲ್ಲಿ ೮ ಡಿಪೋಗಳಿವೆ. ಅವುಗಳಲ್ಲಿ ಚಿಕ್ಕೋಡಿಯಲ್ಲೂ ಒಂದು ಡಿಪೋ ಇದೆ. ಇದೇ ಏರಿಯಾದಲ್ಲಿ ನಿಪ್ಪಾಣಿ ಮತ್ತು ಸಂಕೇಶ್ವರದಲ್ಲಿ ಎರಡು ಸ್ಥಳದಲ್ಲಿದೆ. ಇವುಗಳಲ್ಲಿ ಷೆಡ್ಯೂಲ್ಸ್ ಏನಿದೆ ಎಂದರೆ, ಚಿಕ್ಕೋಡಿಯಲ್ಲಿ ೮೫, ನಿಪ್ಪಾಣಿ ೫೩ ಮತ್ತು ಸಂಕೇಶ್ವರ ೨೨. ಇಷ್ಟು ಇದ್ದು ಅಲ್ಲಿ ಎಲ್ಲ ಸೌಲಭ್ಯಗಳೂ ಇವೆ. ಆದ್ದರಿಂದ ಮತ್ತೊಂದು ಡಿವಿಜನ್ ಬೇಕಾಗಿಲ್ಲ. ೧೯ ಡಿವಿಜನ್‌ಗಳ ಪೈಕಿ ಪ್ರತಿಯೊಂದು ಡಿವಿಜನ್‌ನಲ್ಲಿ ೫೦೦ ರಿಂದ ೬೦೦ ಶೆಡ್ಯೂಲ್‌ಗಳು ಇವೆ. ಅಲ್ಲಿ ಮಾತ್ರ ಡಿವಿಜನ್ ಪ್ರಾರಂಭ ಮಾಡಿದ್ದೇವೆ. ಅಲ್ಲದೆ ಬಾರ್ಡರ್ ಏರಿಯಾದಲ್ಲಿ ಪಬ್ಲಿಕ್ ಸಲುವಾಗಿ Karnataka and Maharastra have entered into a transport agreement, published in Karnataka Gazette dtd.13.4.92-143 routes by Karnataka, 241 routes by Maharastra and jointly on 130 routes. ಈ ಪ್ರಕಾರವಾಗಿ ಇರುವಾಗ ಬೇರೆ ಫೆಸಿಲಿಟೀಸ್ ಬೇಕಾಗಿಲ್ಲ. ಇಲ್ಲಿ ಡಿವಿಜನ್ ಮಾಡುವ ಅವಶ್ಯಕತೆ ಇಲ್ಲ.

ಶ್ರೀ ಎಸ್.ಎಸ್. ಭೀಮಣ್ಣನವರು:- ಇನ್ನುಮುಂದಾದರೂ ಒಂದು ಘಟಕವನ್ನು ತೆಗೆಯಬೇಕಾದರೆ ಚಿಕ್ಕೋಡಿಯನ್ನು ಕನ್ಸಿಡರ್ ಮಾಡುತ್ತೀರಾ ಎಂದು ಸರ್ಕಾರವನ್ನು ಕೇಳುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ:- ಮತ್ತೊಮ್ಮೆ ಹೇಳಿ.

ಶ್ರೀ ಎಸ್.ಎಸ್. ಭೀಮಣ್ಣನವರ್:- ಇನ್ನೊಂದು ಘಟಕ ತೆಗೆಯಬೇಕಾದರೆ ಚಿಕ್ಕೋಡಿಯ ವಿಷಯ ಸರ್ಕಾರದ ತಲೆಯೊಳಗೆ ಇರುತ್ತದೆಯೊ ಎಂದು ಕೇಳುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ:- ಈಗಾಗಲೇ ನಾನು ಉತ್ತರ ಕೊಟ್ಟಿದ್ದೇನೆ.

ಅಧ್ಯಕ್ಷರು:- ಬಸವರಾಜ ರಾಯರೆಡ್ಡಿಯವರೆ, ನಿಮ್ಮ ಪ್ರಶ್ನೆಗೆ ಹದಿನೈದು ದಿವಸ ಟೈಮ್ ಬೇಕು.

ಶ್ರೀ ಬಸವರಾಜ ರಾಯರೆಡ್ಡಿ:- ಇದು ಬಹಳ ಪ್ರಮುಖವಾದ ಪ್ರಶ್ನೆ.

ಅಧ್ಯಕ್ಷರು:- ಸರಿಯಾದ ಉತ್ತರ ಕೊಡಬೇಕಾದರೆ ಸಮಯ ಬೇಕಲ್ಲ.

ಶ್ರೀ ಆರ್.ವಿ. ದೇಶಪಾಂಡೆ:- ಸಮಯ ತೆಗೆದುಕೊಳ್ಳಿ, ಬೇಡವೆಂದು ಹೇಳುವುದಿಲ್ಲ. ಆದರೆ ಆದಷ್ಟು ಬೇಗ ಇದಕ್ಕೆ ಉತ್ತರ ಕೊಡಬೇಕು, ಏಕೆಂದರೆ ಪತ್ರಿಕೆಯಲ್ಲಿ ಕೆಲವು ಮಂತ್ರಿ ಮಂಡಲದ ಸದಸ್ಯರ ಮೇಲೆ ಮೊಕದ್ದಮೆಗಳು ಇವೆ, ಕ್ರಿಮಿನಲ್ ಕೇಸು ಇದೆಯೆಂದು ಬಂದಿದೆ. ಅಫಿಶಿಯಲ್ ಸ್ಪೋಕ್ಸ್‌ಮನ್ ಇಲ್ಲವೆಂದು ಹೇಳಿದ್ದಾರೆ. ಆದ್ದರಿಂದ ಈ ಸಂಬಂಧವಾಗಿ ಒಂದು ನಿರ್ದಿಷ್ಟವಾದ ಪ್ರಶ್ನೆ ಬಂದಿದೆ. ಹಾಗಾಗಿ ಉತ್ತರವನ್ನು ಆದಷ್ಟು ಬೇಗ ಕೊಡಬೇಕು. ಈ ಭರವಸೆಯನ್ನು ಮುಖ್ಯಮಂತ್ರಿಗಳು ಕೊಡಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ:- ಈಗಾಗಲೇ ಎಂ.ಎಲ್.ಎ.ಗಳ ವಿವರ ಬಂದಿದೆ. ಎಂ.ಎಲ್.ಸಿ. ವಿವರ ಕೆಲವು ಬರಬೇಕು. ಇನ್ನು ನಾಲ್ಕೈದು ದಿನಗಳಲ್ಲಿ ಅದು ಬರುತ್ತದೆ. ಬರುವ ವಾರ ಉತ್ತರ ಕೊಡುತ್ತೇನೆ.

ವಿಷಯ:- ಸುಬ್ರಹ್ಮಣ್ಯನಗರ ಮಹಾಲಕ್ಷ್ಮಿ ಬಡಾವಣೆಗಳಲ್ಲಿ ಆರಕ್ಷಕ ಠಾಣೆಗಳ ನಿರ್ಮಾಣ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೧೩:- (೧೮೨)
ಶ್ರೀ ಲಕ್ಕಣ್ಣ (ರಾಜಾಜಿನಗರ)
ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸುಬ್ರಹ್ಮಣ್ಯನಗರ ಮತ್ತು ಮಹಾಲಕ್ಷ್ಮಿ ಲೇಔಟ್‌ಗಳಲ್ಲಿ ಪೋಲೀಸ್ ಠಾಣೆ ಕಟ್ಟಲು ನಗರಪಾಲಿಕೆ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ನಿವೇಶನಗಳನ್ನು ಪಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ನಿವೇಶನಗಳನ್ನು ಹೊಂದಿ ಎಷ್ಟು ವರ್ಷಗಳಾಯಿತು?

ಇ) ಮೇಲ್ಕಂಡ, ಈ ನಿವೇಶನಗಳಲ್ಲಿ ಪೋಲೀಸ್ ಠಾಣೆಗಳ ಕಟ್ಟಡ ಕಟ್ಟಲು ನಕ್ಷೆ ತಯಾರಿಸಲಾಗಿದೆಯೇ?

ಈ) ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಎಂ. ವೀರಪ್ಪ ಮೊಯಿಲಿ
(ಮುಖ್ಯ ಮಂತ್ರಿಗಳು)

ಹೌದು

ಸುಬ್ರಹ್ಮಣ್ಯನಗರ ನಿವೇಶನ ೧.೬.೮೭ ರಂದು ನಗರ ಪಾಲಿಕೆಯಿಂದ ಮಂಜೂರಾಗಿದೆ. ಮಹಾಲಕ್ಷ್ಮಿ ಪೋಲೀಸ್ ಠಾಣೆ ನಿವೇಶನ ೪.೬.೮೪ ರಲ್ಲಿ ಬೆಂಗಳೂರು ನಗರ ಅಭಿವೃದ್ಧಿ ಪ್ರಾಧಿಕಾರದವರಿಂದ ಮಂಜೂರಾಗಿದೆ.

ಸುಬ್ರಹ್ಮಣ್ಯನಗರ ಪೋಲೀಸ್ ಠಾಣೆ ನಕ್ಷೆ ತಯಾರು ಮಾಡಿರುವುದಿಲ್ಲ. ಮಹಾಲಕ್ಷ್ಮಿ ಪೋಲೀಸ್ ಠಾಣೆ ಕಟ್ಟಲು ನಕ್ಷೆ ತಯಾರು ಮಾಡಿಸಿದೆ.

ಸುಬ್ರಹ್ಮಣ್ಯನಗರಕ್ಕೆ ಸಂಬಂಧಿಸಿದಂತೆ ನಿವೇಶನವನ್ನು ಸ್ವಾಧೀನಕ್ಕೆ ಬಂದಿಲ್ಲದೆಯಿರುವುದರಿಂದ ನಕ್ಷೆ ತಯಾರಿಸಿರುವುದಿಲ್ಲ.

ಶ್ರೀ ಕೆ. ಲಕ್ಕಣ್ಣ:- ನಮ್ಮ ಕ್ಷೇತ್ರದಲ್ಲಿ ಎರಡು ಪೋಲೀಸ್ ಸ್ಟೇಷನ್‌ಗಳಿಗೆ ಜಾಗವನ್ನು ಕೊಟ್ಟಿದ್ದಾರೆ. ಒಂದಕ್ಕೆ ಹತ್ತು ವರ್ಷವಾಗಿದೆ ಮತ್ತು ಇನ್ನೊಂದಕ್ಕೆ ಏಳು ವರ್ಷವಾಗಿದೆ. ಆದರೆ ಇದುವರೆಗೂ ಕಟ್ಟಡವಾಗಿಲ್ಲ. ಈಗಿನ ಕಟ್ಟಡಗಳು ಬಾಡಿಗೆಯಲ್ಲಿವೆ. ಮತ್ತು ಆ ಕ್ಷೇತ್ರಕ್ಕೆ ಏನು ಒಳವಯಿತ್ತವ. ಇಬ್ಬ ಕೊನೆಯ ಸೈಡ್‌ನಲ್ಲಿವೆ. ನಾಗರೀಕರು ಏನಾದರೂ ದೂರು ಕೊಡಬೇಕಾದರೆ, ಬಹಳ ಶ್ರಮಪಟ್ಟು ಹೋಗಬೇಕಾಗಿದೆ. ಆದ್ದರಿಂದ ಈ ಸ್ಥಳದಲ್ಲಿ ಬೇಗ ಪೋಲೀಸ್ ಠಾಣೆ ಕಟ್ಟುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ತಮ್ಮ ಮುಖಾಂತರ ಮಾನ್ಯ ಗೃಹಮಂತ್ರಿಗಳನ್ನು ಕೇಳುತ್ತಿದ್ದೇನೆ.

ಶ್ರೀ ರಮೇಶಬಾಬು (ಸಭಾನಾಯಕ ಅಧ್ಯಕ್ಷರೇ, ಸುಬ್ರಹ್ಮಣ್ಯನಗರ ಮತ್ತು ಮಹಾಲಕ್ಷ್ಮಿ ಲೇಔಟ್‌ಗಳಲ್ಲಿ ಪೋಲೀಸ್ ಠಾಣೆ ಕಟ್ಟಲು ನಗರ ಪಾಲಿಕೆ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ನಿವೇಶನಗಳನ್ನು ಪಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಈ ನಿವೇಶನಗಳನ್ನು ಪಡೆದು ಎಷ್ಟು ವರ್ಷವಾಯಿತು ಎಂದು ಸನ್ಮಾನ್ಯ ಗೌರವಾನ್ವಿತ ಸದಸ್ಯರು ಕೇಳಿದ್ದಾರೆ. ಸುಬ್ರಹ್ಮಣ್ಯನಗರ ನಿವೇಶನ ೧.೬.೮೭ರಂದು ನಗರ ಪಾಲಿಕೆಯಿಂದ ಮಂಜೂರಾಗಿದೆ, ಮಹಾಲಕ್ಷ್ಮಿ ಪೋಲೀಸ್ ಠಾಣೆ ನಿವೇಶನ ೪.೬.೮೪ರಲ್ಲಿ ಬೆಂಗಳೂರು ನಗರ ಅಭಿವೃದ್ಧಿ ಪ್ರಾಧಿಕಾರದವರಿಂದ ಮಂಜೂರಾಗಿದೆ. ಮೇಲ್ಕಂಡ ಸ್ಥಳಗಳಲ್ಲಿ ಪೋಲೀಸ್ ಠಾಣೆಗಳ ಕಟ್ಟಡ ಕಟ್ಟಲು ನಕ್ಷೆ ತಯಾರಿಸಲಾಗಿಯೇ ಎಂದು ಕೇಳಿರುವುದಕ್ಕೆ, ಸುಬ್ರಹ್ಮಣ್ಯನಗರ ಪೋಲೀಸ್ ಠಾಣೆ ನಕ್ಷೆ ತಯಾರು ಮಾಡಿರುವುದಿಲ್ಲ. ಮಹಾಲಕ್ಷ್ಮಿ ಪೋಲೀಸ್ ಠಾಣೆ ಕಟ್ಟಲು ನಕ್ಷೆ ತಯಾರು ಮಾಡಿಸಿದೆ, ಮತ್ತು ಸುಬ್ರಹ್ಮಣ್ಯನಗರಕ್ಕೆ ಸಂಬಂಧಿಸಿದಂತೆ, ನಿವೇಶನ ಸ್ವಾಧೀನಕ್ಕೆ ಬಂದಿಲ್ಲದೇ ಇರುವುದರಿಂದ ನಕ್ಷೆ ತಯಾರು ಮಾಡಲು ಸಾಧ್ಯವಾಗಿರುವುದಿಲ್ಲ.

ಶ್ರೀ ಕೆ. ಲಕ್ಕಣ್ಣ:- ಯಾವಾಗ ಕಟ್ಟಡವನ್ನು ಶುರು ಮಾಡುತ್ತೀರಿ ಮತ್ತು ಸ್ಥಳ ಮಂಜೂರಾಗಿದೆ, ಹೋಗಿ ಪೊಸಿಷನ್ ತೆಗೆದುಕೊಳ್ಳಬೇಕು, ಯಾರೂ ಹೋಗಿರುವುದಿಲ್ಲ. ಈ ಎರಡು ಕೆಲಸಗಳನ್ನು ಯಾವಾಗ ಮಾಡುತ್ತಿರಿ ಎಂದು ತಮ್ಮ ಮುಖಾಂತರ ಕೇಳುತ್ತಿದ್ದೇನೆ.

ಶ್ರೀ ರಮಾನಾಥ ರೈ:- ಒಂದು ಪೋಲೀಸ್ ಠಾಣೆ ನಕ್ಷೆ ಈಗಾಗಲೇ ತಯಾರಾಗಿದೆ. ಇದರ ಬಗ್ಗೆ ನಾವು ಅದಷ್ಟು ಶೀಘ್ರವಾಗಿ ಕಾರ್ಯಕ್ರಮ ಹಾಕಿಕೊಳ್ಳುತ್ತೇವೆ.

ವಿಷಯ:- ಹೈದರಾಬಾದ್ ಕರ್ನಾಟಕ ಪ್ರದೇಶಗಳಲ್ಲಿನ ಜನರು ಬಸ್‌ಟಾಪ್‌ಗಳ ಮೇಲೆ ಪ್ರಯಾಣ ಮಾಡುತ್ತಿರುವ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೧೪:- (೧೪೮)
ಶ್ರೀ ಗುರುಪಾದಪ್ಪ ನಾಗ್ಮಾರಪಳ್ಳಿ (ಔರಾದ್)
ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೈದರಾಬಾದ್ ಕರ್ನಾಟಕ ಪ್ರದೇಶಗಳಲ್ಲಿನ ಅದರಲ್ಲೂ ವಿಶೇಷವಾಗಿ ಬೀದರ್ ಹಾಗೂ ಗುಲ್ಬರ್ಗ ಜಿಲ್ಲೆಯ ಜನರು ಬಸ್ಸುಗಳ ಕೊರತೆಯಿಂದಾಗಿ ಬಸ್‌ಟಾಪ್‌ಗಳ ಮೇಲೆ ಪ್ರಯಾಣ ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಆ) ಈ ಬಸ್ ಮೇಲ್ಸಾವಣಿಯ ಮೇಲಿನ ಪ್ರಯಾಣವನ್ನು ತಡೆಗಟ್ಟಲು ಅಗತ್ಯ ಸಂಖ್ಯೆಯ ಬಸ್‌ಗಳನ್ನು ಈ ಪ್ರದೇಶಗಳಿಗೆ ಓಡಿಸಲಾಗುವುದೇ?

ಇ) ಈಗಿನ ಸರ್ಕಾರದಿಂದ ಇದುವರೆಏಗೆ ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ವಿಶೇಷವಾಗಿ ಬೀದರ್ ಮತ್ತು ಗುಲ್ಬರ್ಗ ಜಿಲ್ಲೆಗಳಿಗೆ ಎಷ್ಟು ಬಸ್‌ಗಳನ್ನು ಒದಗಿಸಲಾಗಿದೆ?

ಶ್ರೀ ಭೀಮಣ್ಣ ಖಂಡ್ರೆ
(ಸಾರಿಗೆ ಸಚಿವರು)

ಹೌದು.

ಹೌದು

ಬಸ್ಸುಗಳ ಭಾವಣಿಗಳ ಮೇಲೆ ಪ್ರಯಾಣಿಸುವುದನ್ನು ತಡೆಗಟ್ಟಲು ಏಪ್ರಿಲ್ ೯೨ರಿಂದ ಇಲ್ಲಯವರಿಗೆ ಗುಲ್ಬರ್ಗ ವಿಭಾಗಕ್ಕೆ ೧೪ ಅಧಿಕ ಅನುಸೂಚಿಗಳನ್ನು, ಬೀದರ್ ವಿಭಾಗಕ್ಕೆ ೫ ಅಧಿಕ ಅನುಸೂಚಿಗಳನ್ನು ಮತ್ತು ರಾಯಚೂರು ವಿಭಾಗಕ್ಕೆ ೧೪ ಅಧಿಕ ಅನುಸೂಚಿಗಳನ್ನು ಕಲ್ಪಿಸಲಾಗಿದೆ. ಅಲ್ಲದೆ ಮಾರ್ಚ್ ೯೩ರ ವೇಳೆಗೆ ಈ ಜಿಲ್ಲೆಗಳಿಗೆ ೩೩ ಹೆಚ್ಚುವರಿ ಅನುಸೂಚಿಗಳನ್ನು ಕಲ್ಪಿಸಲು ಯೋಚಿಸಿದೆ.

ಶ್ರೀ ಬಸವರಾಜ ರಾಯರೆಡ್ಡಿ:- ಈ ಪ್ರಶ್ನೆಯನ್ನು ಸಾರಿಗೆ ಸಚಿವರಿಗೆ ಕೇಳಿದ್ದಾರೋ ಅಥವಾ ಮುಖ್ಯಮಂತ್ರಿಗಳಿಗೆ ಕೇಳಿದ್ದಾರೋ ಗೊತ್ತಾಗುತ್ತಾ ಇಲ್ಲ. ಇಲ್ಲಿ ಮುದ್ರಣದಲ್ಲಿ ಸ್ವಲ್ಪ ತಪ್ಪಾಗಿದೆ. ಮುಖ್ಯಮಂತ್ರಿಗಳು ಎಂದು ಬಂದಿದೆ. ಚೀಫ್ ಮಿನಿಸ್ಟರ್ ಫಾರ್ ಟ್ರಾನ್ಸ್‌ಪೋರ್ಟ್ ಎಂದು ಇದೆ. ನನ್ನ ಪ್ರಶ್ನೆಯಲ್ಲೂ ಒಂದು ತಪ್ಪು ಇದೆ. ಅಂದರೆ, ಖಂಡ್ರೆಯವರೂ ಚೀಫ್ ಮಿನಿಸ್ಟರ್ ಆಗುತ್ತಾರೆಯೋ. ಇದನ್ನು ದಯಮಾಡಿ ಸರಿಮಾಡುವುದಕ್ಕೆ ಹೇಳಬೇಕು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ಪರವಾಯಿಲ್ಲ, ಮುಖ್ಯಮಂತ್ರಿಗಳಾದರೂ ಉತ್ತರ ಹೇಳಲಿ ಅಥವಾ ಯಾರಾದರೂ ಉತ್ತರ ಹೇಳಲಿ, ಸಂತೋಷ. ಮಾನ್ಯ ಮಂತ್ರಿಗಳು ಬಸ್ಸಿನ ಮೇಲೆ ಜನಗಳು ಕುಳಿತುಕೊಳ್ಳುವುದು ನಮ್ಮ ಗಮನಕ್ಕೆ ಬಂದಿದೆ ಎಂದು ಹೇಳಿದ್ದೀರಿ. ಇವತ್ತು ಬಹಳ ಜನ ಬಸ್ಸಿನ ಮೇಲೆ ಕುಳಿತುಕೊಳ್ಳುವುದನ್ನು ತಾವೂ ನೋಡಿದ್ದೀರಿ. ತಾವೂ ಕೂಡ ಅಲ್ಲಿಯವರೇ, ತಮಗೆಲ್ಲಾ ಗೊತ್ತಿದೆ. ಈಗ ನಮಗೆ ಏನಾಗಿದೆ ಎಂದರೆ, ಮಾನ್ಯ ಖಂಡ್ರೆಯವರು ಮಂತ್ರಿಯಾದ ಮೇಲೆಯೂ ಈ ರೀತಿ ಏಕೆ ಆಗುತ್ತಿದೆ, ಇದು ಆಗಬಾರದು. ಈ ರೀತಿ ಮಾಡಬಾರದು ಎಂದು, ಮೊದಲು ಅವರೇ ಎಲ್ಲರಿಗೂ ಬೈಯುತ್ತಿದ್ದರು. ಆದರೆ,